ಗುಂಡ: ನೀನು ಹೀಗೆ ಕುಡಿದರೆ ಸಂಸಾರ ಹೇಗೆ ಸಾಗಿಸ್ತೀಯಾ?
ಬಸ್ಯಾ: ಖಾಲಿ ಬಾಟಲು ಮಾರಿ ಬಂದ ಹಣದಿಂದ

***

ಗುಂಡ: ಏಸುಕ್ರಿಸ್ತ ಹೇಳಿದ್ದಾನೆ ಕುಡಿತ ಮನುಷ್ಯನ ವೈರಿ ಎಂದು.
ಬಸ್ಯಾ: ವೈರಿಯನ್ನು ಪ್ರೀತಿಸಬೇಕು ಎಂದೂ ಅವನು ಹೇಳಿದ್ದಾನೆ.

***

ಗುಂಡ: ನಿನಗೆ 'ಪರಮ ಆಲಸಿ' ಎಂದು ಬಹುಮಾನ ಬಂದರೆ ಏನು ಮಾಡ್ತೀಯಾ?
ಬಸ್ಯಾ: ನನ್ನ ಹೆಂಡತಿಯನ್ನು ಕಳಿಸಿ ತೆಗೆದುಕೊಳ್ಳುತ್ತೇನೆ.

***

ಅಧ್ಯಾಪಕ: ಸೋಷಿಯಲ್ ಡಿಸ್ಟೆನ್ಸ್ ಮತ್ತು ಕ್ವಾರಂಟೈನ್ ಕನ್ನಡ ಶಬ್ದ ಹೇಳಿ?
ವಿದ್ಯಾರ್ಥಿ: ಮಡಿ ಮತ್ತು ಮೈಲಿಗೆ

***

ಗುಂಡ: ಡಾಕ್ಟರ್ರೇ, ನಾನು ಸಣ್ಣಗಾಗಲು ಏನು ಮಾಡಬೇಕು?
ಡಾಕ್ಟರ್: ಚೆನ್ನಾಗಿ ತಲೆ ಅಲ್ಲಾಡಿಸಬೇಕು?
ಗುಂಡ: ಅದು ಹ್ಯಾಗೆ ಸಾರ್?
ಡಾಕ್ಟರ್: ಯಾರಾದರೂ ತಿನ್ನಲು ಕೊಟ್ಟರೆ ಬೇಡ ಎಂದು ತಲೆ ಅಲ್ಲಾಡಿಸಬೇಕು.

***

ಸಾರಾಯಿಗೂ ವಿಷಕ್ಕೂ ಏನು ವ್ಯತ್ಯಾಸ?
ಸಾರಾಯಿ ಕುಡಿದವನು ಎಲ್ಲರ ಮುಂದೆ ಕುಣಿತಾನೆ. ವಿಷ ಕುಡಿದರೆ ಎಲ್ಲರೂ ಕುಡಿದವನ ಮುಂದೆ ಕುಣಿತಾರೆ.

***

ಮಕ್ಕಳಿಗಿಂತ ತುಂಬಾ ಹಟಮಾರಿ ಯಾರು?
ಮೊಬೈಲ್!
ಯಾಕೆ?
ಸದಾ ಎತ್ತಿಕೊಂಡಿರಬೇಕು.



ಗಂಡ: ಸುಗಮ ಸರ್ಕಾರಕ್ಕೆ ಪ್ರಧಾನಿ ಉಪಪ್ರಧಾನಿ, ರಾಷ್ಟ್ರಪತಿಉಪರಾಷ್ಟ್ರಪತಿ, ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಇರುವಂತೆ, ಸುಗಮ ಸಂಸಾರಕ್ಕೆ ಉಪಪತ್ನಿ ಇರಬಾರದೇಕೆ?
ಹೆಂಡತಿ: ಹಾಗೆಯೇ ಉಪಪತಿಯೂ ಇರಲಿ, ಸಂಸಾರ ಇನ್ನೂ ಸುಗಮ ಆಗಿರುತ್ತದೆ.

***

ಮಗ: ಅಪ್ಪ ಆಫೀಸಿಗೆ ಹೋಗಲು ರೆಡಿಯಾಗಿ ಕುಳಿತಿದ್ದಾರೆ.
ತಾಯಿ: ಅದು ಹೇಗೆ ಗೊತ್ತಾಯಿತೋ ನಿನಗೆ?
ಮಗ: ಮತ್ತೆ ಮತ್ತೆ ಆಕಳಿಸುತ್ತಲೇ ಇದ್ದಾರೆ.

***

ಮಾಂಸಾಹಾರಿ, ಸಸ್ಯಾಹಾರಿ ಮತ್ತು ಸಂಸಾರಿ ಗಳ ಅರ್ಥವೇನು?
ಮಾಂಸ ತಿನ್ನುವವ ಮಾಂಸಾಹಾರಿ, ಸಸ್ಯ(ತರಕಾರಿ) ತಿನ್ನುವವ ಸಸ್ಯಾಹಾರಿ ಮತ್ತು ಸಮಸ್ಯೆಗಳನ್ನು ತಿಂದು ಬದುಕುವವ ಸಂಸಾರಿ.

***

ಆನ್ ಲೈನ್ ಶಾಪಿಂಗ್ ಸಂಸ್ಥೆಯೊಂದು ಮಾಟ್ರಿಮೋನಿಯಲ್ ಸೇವೆಯನ್ನು ಆರಂಭಮಾಡುತ್ತದೆಯಂತೆ.

***

ಆಸ್ಪತ್ರೆಗೆ ದಾಖಲಾದ ಹಿರಿಯನಾಗರಿಕರೊಬ್ಬರು ಸುಂದರಿಯರಾದ ನರ್ಸ್‌ಗಳನ್ನು ತಮ್ಮ ಆರೈಕೆಗೆ ನೇಮಿಸಿಕೊಳ್ಳುವಂತೆ ವೈದ್ಯರನ್ನು ಕೇಳಿಕೊಳ್ಳುತ್ತಾರೆ.
ಡಾಕ್ಟರ್: ಈ ವಯಸ್ಸಿನಲ್ಲೂ?
ಹಿರಿಯನಾಗರಿಕ: ಅವಳನ್ನು ನೋಡುವ ನೆಪದಲ್ಲಾದರೂ ನನ್ನ ಮಕ್ಕಳು ನನ್ನನ್ನು ನೋಡಲು ಬರುತ್ತಾರೆ.

***

ತನ್ನ ತಂದೆ ಸತ್ತ ಸುದ್ದಿಯನ್ನು ನೀಡಲು ವ್ಯಾಪಾರಿಯೊಬ್ಬ ಪತ್ರಿಕಾ ಕಚೇರಿಗೆ ಬರುತ್ತಾನೆ.
ಪತ್ರಿಕೆಯವನು: ಇದು ಜಾಹೀರಾತು ಅಗಿದ್ದು ಪ್ರತಿ ಶಬ್ದಕ್ಕೆ ರೂ 50 ಆಗುತ್ತದೆ. ಏನು ಬರೆಯಲಿ?
ವ್ಯಾಪಾರಿ: ತಂದೆ ನಿಧನರಾದರು
ಪತ್ರಿಕೆ: ಕನಿಷ್ಠ ಐದು ಶಬ್ದಗಳು ಇರಬೇಕು
ವ್ಯಾಪಾರಿ: ತಂದೆ ನಿಧನರಾದರು. ವೀಲ್ ಚೇರ್ ಮಾರಾಟಕ್ಕೆ...

***

ಕಾರ್ಮಿಕ ಕಮೀಷನರ್: ನಿಮ್ಮ ಸಮಸ್ಯೆಗಳನ್ನು ಏಕೆ ಆಡಳಿತವರ್ಗದೊಡನೆ ಚರ್ಚಿಸುವುದಿಲ್ಲ?
ಕಾರ್ಮಿಕ: ಮಲೇರಿಯಾ ಸಮಸ್ಯೆಯನ್ನು ಸೊಳ್ಳೆಗಳ ಸಂಗಡ ಚರ್ಚಿಸುವುದಿಲ್ಲ.

***

ನಮ್ಮ ದೇಶದ ವೈಚಿತ್ರ್ಯ ಏನು?
ಎರಡು ಮಕ್ಕಳನ್ನು ಹೆತ್ತೋರು ತೆರಿಗೆ ತೆರುತ್ತಾರೆ. ಹತ್ತು ಮಕ್ಕಳು ಇದ್ದೋರು ಸಬ್ಸಿಡಿ ಪಡೆಯುತ್ತಾರೆ.

(ಸಂಗ್ರಹ) ರಮಾನಂದ ಶರ್ಮಾ, ಬೆಂಗಳೂರು

ಕೋವಿಡ್ ನಂತರ ಪುಟ್ಟನ ಶಾಲೆ ಶುರುವಾಯಿತು. ಎರಡನೇ ದಿನ ಪುಟ್ಟನ ಟೀಚರ್ ತಾಯಿಗೆ ಫೋನಿಸಿ ಹೇಳಿದರು. 'ಇವನ ತುಂಟತನ ಸಹಿಸಲು ಆಗುತ್ತಿಲ್ಲ'. ಪುಟ್ಟನ ತಾಯಿಗೆ ಸಿಕ್ಕಾಪಟ್ಟೆ ಕೋಪ ಬಂತು.
ಎರಡು ದಿನಕ್ಕೆ ಹೀಗೆ ಅನ್ನುತ್ತಿದ್ದೀರಿ, ನಿಮ್ಮ ವಿದ್ಯಾರ್ಥಿಯನ್ನ ನಮ್ಮ ಮನೆಯಲ್ಲಿ ಐದು ತಿಂಗಳು ಹೇಗೆ ಸಹಿಸಿಕೊಂಡೆವು ಅಂತ ಯೋಚನೆ ಮಾಡಿ!" ಎಂದು ಕಟ್ ಮಾಡಿದಳು.

***

ಕೋಟ್ಯಧಿಪತಿಗೆ ಅವನ ಸ್ನೇಹಿತ ಕೇಳಿದ: ನಿನಗೆ 60ವರ್ಷ, 30 ವರ್ಷದ ಸುಂದರಿ ನಿನ್ನನ್ನು ಮದುವೆಯಾಗಲು ಹೇಗೆ ಒಪ್ಪಿಸಿದೆ?
ಶ್ರೀಮಂತ ಕಣ್ಣು ಮಿಟುಕಿಸುತ್ತ ಹೇಳಿದ: ನನಗೆ 80 ವರ್ಷ ಅಂತ ಸುಳ್ಳು ಹೇಳಿದೆ!

***

ನಡುರಾತ್ರಿ ವೇಗವಾಗಿ ಚಲಿಸುತ್ತಿದ್ದ ಕಾರನ್ನು ಪೊಲೀಸ್ ನಿಲ್ಲಿಸಿ ಪರೀಕ್ಷಿಸಿದ. ಹಿಂದಿನ ಸೀಟಿನಲ್ಲಿ ಹಲವು ಚಾಕುಗಳಿದ್ದವು. ಯಾಕೆಂದು ಕೇಳಲಾಗಿ ಒಳಗಿದ್ದವನು ಹೇಳಿದ್ದು: ಸರ್ಕಸ್ಸಿನಲ್ಲಿ ಚಾಕುಗಳನ್ನು ಮೇಲೆಸೆಯುತ್ತ ಆಟವಾಡುವುದು ನನ್ನ ವೃತ್ತಿ.
ಪೊಲೀಸಿನವನು ನಂಬಲಿಲ್ಲ. ಮಾಡಿ ತೋರಿಸಲು ಸವಾಲು ಹಾಕಿದ. ಇವನು ಒಂದಾದ ಮೇಲೆ ಒಂದರಂತೆ ಒಟ್ಟು ಐದು ಚಾಕುಗಳನ್ನು ಮೇಲಕ್ಕೆ ತೂರಿ ನೆಲಕ್ಕೆ ಬೀಳದಂತೆ ಚಾಕಚಕ್ಯತೆಯಿಂದ ಹಿಡಿಯುತ್ತಿದ್ದ. ಒಂದೂ ಮೈಗೆ ತಾಗುತ್ತಿರಲಿಲ್ಲ. ಇಷ್ಟರಲ್ಲಿ ಧಾವಿಸಿಬಂದ ಕಾರೊಂದು ಗಕ್ಕನೆ ನಿಂತಿತು. ಅದರೊಳಗೆ ಇದ್ದವನು ಈ ಚಾಕು ತೂರಿ ಹಿಡಿಯುತ್ತಿದ್ದ ಘಟನೆಯನ್ನು ಕಂಡು ಗಾಬರಿಯಾಗಿ ಉದ್ಗರಿಸಿದ: 'ಅಯ್ಯೋ, ಈ ಹೊಸ ಪರೀಕ್ಷೆ ಎಲ್ಲಿಂದ ಬಂತಪ್ಪ. ದೇವರೇ, ನಾನು ಯಾವತ್ತೂ ಕುಡಿಯೋದಿಲ್ಲ'!

***

ಹಡಗು ಮುಳುಗಿದಾಗ ಇವನು ಈಜಿ ಪಾರಾಗಿ ದ್ವೀಪ ಸೇರಿ ಐದು ವರ್ಷ ಒಂಟಿಯಾಗಿದ್ದ. ನಂತರ ದೊಡ್ಡ ಹಡಗು ಕಂಡಾಗ ಓಡಾಡಿ ಕೈಬೀಸಿ ನಿಲ್ಲಿಸಿದ. ಅಲ್ಲಿಂದ ದೋಣಿಯಲ್ಲಿ ಬಂದ ವ್ಯಕ್ತಿಯೊಬ್ಬ ಹಳೆಯ ಪತ್ರಿಕೆಗಳ ಕಂತೆ ಕೊಡುತ್ತ ಹೇಳಿದ: 'ಇದರಲ್ಲೆಲ್ಲ ಕೋವಿಡ್ ಬಗೆಗೆ ಸುದ್ದಿಯಿದೆ. ಇದು ಓದಿದ ನಂತರವೂ ಬರಲು ಮನಸ್ಸು ಒಪ್ಪಿದರೆ ಕರೆದುಕೊಂಡು ಹೋಗುತ್ತೇವೆ ಅಂತ ಕ್ಯಾಪ್ಟನ್ ಹೇಳಿದ್ದಾರೆ'.

***

ಸೈನ್ಯಕ್ಕೆ ಭರ್ತಿಮಾಡಿಕೊಳ್ಳಲು ನವಯುವಕರು ಸಾಲಿನಲ್ಲಿ ನಿಂತಿದ್ದರು. ಅದರಲ್ಲೊಬ್ಬ ವಯಸ್ಸಾದವನೂ ಇದ್ದ. 'ಇದು ಯುವಸೈನಿಕರಿಗೆ ಮಾತ್ರ. ನಿನಗೇನು ಕೆಲಸ?' ಎಂದು ಕೇಳಿದ್ದಕ್ಕೆ ಉತ್ತರಿಸಿದ: 'ಯಾಕೆ, ಸೈನ್ಯಕ್ಕೆ ಮೇಜರ್ ಕರ್ನಲ್ ಬೇಕಿಲ್ಲವೇ'?

(ಸಂಗ್ರಹ– ಸಂಸ್ಕರಣೆ): ವಿನೋದ ಛೆಬ್ಬಿ